ಶ್ರೀ ಎಚ್. ಎಸ್. ಸಿದ್ದಪ್ಪ.—ಸಾಮಾನ್ಯವಾಗಿ ಮಂತ್ರಿಗಳು ಪ್ರವಾಸ ಹೋದಾಗ ಜಾಸ್ತಿ ವರ್ಗಾವರ್ಗಿಗಳ ಬಗ್ಗೆ ತಮಗೆ ರೆಪ್ರೆಸೆಂಟೇಷನ್ ಬರುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಆರೀತಿ ಹೇಳಬಹುದು. ಅವರನ್ನು ವರ್ಗ ಮಾಡುವುದಕ್ಕೆ ರೆಪ್ರೆಸೆಂಟೇಷನ್ ತೆಗೆದುಕೊಳ್ಳುವುದು ಒಂದಕ್ಕೆ ಮಂತ್ರಿಗಳು ಪ್ರವಾಸ ಹೋಗುವುದಿಲ್ಲ. ಅನೇಕ ವಿಷಯಗಳ ಬಗ್ಗೆ ಪ್ರವಾಸ ಹೋಗಬೇಕಾಗುತ್ತದೆ. ಅದರ ಜೊತೆಗೆ ಇದೂ ಒಂದು.

ಶ್ರೀ ಕೆ. ಪ್ರಭಾಕರ್.—ಸರ್ಕಾರಿ ನೌಕರರ ನಡತೆ ವಿಷಯದಲ್ಲಿ ವಿಚಾರಣೆ ನಡೆಯಬೇಕು ನಿಜ. ಅವರನ್ನು ಸಸ್ಪೆನ್‌ಷನ್ ಇಟ್ಟು ವಿಚಾರಣೆ ನಡೆಯಬೇಕೇ ವಿನಃ ಆರೀತಿ ವರ್ಗ ಮಾಡುವುದರಿಂದ ಏನೂ ಪ್ರಯೋಜನವಿಲ್ಲಾ. ಆ ರೀತಿ ಮಾಡುವುದು ತಪ್ಪು. ಅವರನ್ನು ಎನ್‌ಕ್ವೈರಿ ಮಾಡಬೇಕಾದರೆ ವರ್ಗ ಮಾಡುವ ಬದಲು ಸಸ್ಪೆನ್‌ಷನ್‌ನಲ್ಲಿ ಇಟ್ಟು ವಿಚಾರಣೆ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಸ್ಪೆನ್‌ಷನ್‌ನಲ್ಲಿ ಇಟ್ಟು ವಿಚಾರಣೆ ಮಾಡುವುದೂ ಕೆಲವು ಕೇಸುಗಳು ಇವೆ, ಹಾಗೆಯೇ ವಿಚಾರಣೆ ಮಾಡುವುದೂ ಕೆಲವು ಕೇಸುಗಳು ಇವೆ. ಏನಾದರೂ ಸೀರಿಯಸ್ ಕೇಸ್‌ಗಳು ಯಾವುದಾದರೂ ಇದ್ದರೆ ಆ ಸಂದರ್ಭದಲ್ಲಿ ಸಸ್ಪೆನ್‌ಷನ್‌ನಲ್ಲಿ ಇಟ್ಟು ಎನ್‌ಕ್ವೈರಿ ಮಾಡಬೇಕಾಗುತ್ತದೆ. ಕಾರಣ ಅವನು ಅಧಿಕಾರವನ್ನು ದುರುಪಯೋಗ ಮಾಡ್ಕೊಂಡಿದರೆ ಅದಕ್ಕೆ ಸಂಬಂಧಪಟ್ಟ ಸಾಕ್ಷಿ, ಸಾಕ್ಷಿತ್ವ, ಮಾಹಿತಿ, ಇವುಗಳು ಅಗಿಂದಾಗ್ಗೆ ಬೇಕಾದರೆ ಅವನ ಮೇರೆ ಸೀರಿಯಸ್ ಅಲಗೇಷನ್ ಆದ ಸಂದರ್ಭದಲ್ಲಿ ಅವನನ್ನು ಸಸ್ಪೆನ್‌ಷನ್ ಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್ —ಈ ವರ್ಗಾವರ್ಗಿ ಆಗುವುದು ಪ್ರತಿಭಾವಂತ ವ್ಯಕ್ತಿಗಳಿಂದ. ಅವರ ಪ್ರಭಾವದಿಂದ ವರ್ಗ ಮಾಡುತ್ತಾರೆ. ನಿಮ್ಮ ಪಕ್ಷದವರು ಒಬ್ಬರನ್ನು ವರ್ಗ ಮಾಡಿ ಎಂದು ಹೇಳಿದಾಗ ತಕ್ಷಣ ಆದೇಶ ಕೊಟ್ಟಿದ್ದೀರಿ, ಅವನ್ನು ರಿಲೀವ್ ಮಾಡಿ ಕಳುಹಿಸಿಕೊಡಿ ಎಂದು. ಮತ್ತೆ ಅವನಿಗೆ ರಿಲೀವ್ ಕೂಡ ಆಯಿತು. ಮತ್ತೆ ಅವರೇ ಬಂದು ಅವನನ್ನು ಇಲ್ಲೇ ಉಳಿಸಿಕೊಡಿ ಎಂದು ಕೇಳಿಕೊಂಡಾಗ ರಿಲೀವ್ ಆದವನನ್ನು ಅಲ್ಲಿಗೇ ವಾಪಸ್ಸು ಕಳುಹಿಸಿಕೊಟ್ಟಿದ್ದೀರಿ. ಇವಕ್ಕೆ ಕಾರಣ ಏನು ಎಂದು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥಾದ್ದು ಯಾವುದಾದರೂ ಕೇಸು ಇದ್ದ ಪಕ್ಷದಲ್ಲಿ ನನ್ನ ಗಮನಕ್ಕೆ ತಂದರೆ ಅದಕ್ಕೆ ಕಾರಣ ಏನು ಎಂದು ತಮಗೆ ಸಮಾಧಾನವಾಗುವಂತೆ ವಿವರಿಸಿ ತಿಳಿಸಿಕೊಡುತ್ತೇನೆ.

MALPRACTICES IN AIDED SCHOOLS

313. Sri M. S. KRISHNAN (Malleswaram).—

Will the Minister for Education be pleased ot state :—

(*a*) whether the Government is aware of several malpractices and irregularities in the functioning and conduct of affairs of Aided Schools, such as Nandanavana Fort School (Kodhandaramapur) Bangalore, JAV School (Kodhandaramapur), Bangalore, etc. ;

(*b*) whether it is a fact that the teachers in most of the Aided Schools in the State are not being paid their full salary despite the Cheque system ;

(*c*) the action the Government has taken to put down these malpractices ;

(*d*) whether the Government intends to take over all the aided schools in the State and run them as Government Schools in the interest of the teachers, students, parents and education ?

Sri A. R. BADARINARAYANA (Minister for Education):—

(*a*) Yes.

(*b*) No. The Salaries are regularly paid through Cheques.

(*c*) Stringent action like derecognition has ben taken against schools where malpractices have been proved. Action will also be taken against such of the remaining schools, if the alleged malpracs are established.

(*d*) No.

ಶ್ರೀ ಎಂ. ಎಸ್. ಕೃಷ್ಣನ್.—ಸ್ಯಾಮಿ (ಅ) ಗೆ ಉತ್ತರವಾಗಿ ನಿಜವಲ್ಲ, ವೇತನಗಳನ್ನು ಚೆಕ್ಕುಗಳ ಮೂಲಕ ಕ್ರಮವಾಗಿ ಪಾವತಿ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ ಈ ನಂದನವನ ಕೋಡೆ ಹಾಗೂ ಜೆ. ಎ. ವಿ. ಶಾಲೆಗಳಲ್ಲಿ ಈ ಬಗ್ಗೆ ಅನೇಕ ದುರ್ವ್ಯವಹಾರ ಮತ್ತು ಅಕ್ರಮಗಳು ನಡೆಯುತ್ತಿದೆ ಎಂದು ತಮಗೆ ರೆಪ್ರಸೆಂಟೇಷನ್ ಬಂದಿಲ್ಲವೇ ? ಚೆಕ್ ಮೂಲಕ ವೇತನ ಪಡೆಯುವ ಪದ್ಧತಿ ಇದ್ದರೂ ಕೂಡ ಅಲ್ಲಿಯ ಟೀಚರ್ಸ್‌ಗೆ ಒಂದು ವರ್ಷದಿಂದಲೂ ಸಂಬಳ ಸಿಕ್ಕಿಲ್ಲ; ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಈಗ ಟೀಚರ್ಸ್‌ಗಳಿಗೆ ಚೆಕ್ ಮೂಲಕ ವೇತನಗಳು ಕ್ರಮವಾಗಿ ಪಾವತಿ ಮಾಡಲಾಗುತ್ತಿದೆ. ಇದರಲ್ಲಿ ಏನು ಮಾಲ್‌ಪ್ರಾಕ್ಟೀಸ್ ಇದೆಯೋ ಮಾನ್ಯ ಸದಸ್ಯರು ಹೇಳುವುದು ಅರ್ಥವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳುತ್ತಿದ್ದೀರಿ ವೇತನಗಳನ್ನು ಚೆಕ್ ಮೂಲಕ ಪಾವತಿ ಮಾಡಲಾಗುತ್ತಿದೆ ಎಂದು. ಆದರೆ, ಇದರಲ್ಲಿ ಏನಾಗುತ್ತಿದೆ ಎಂದರೆ ಆ ಚೆಕ್‌ನಲ್ಲಿ 160 ರೂಪಾಯಿ ಇದ್ದರೆ ಅದರಲ್ಲಿ ಅವರು 60-70 ರೂಪಾಯಿ ಬಳಸಿಕೊಂಡು ಉಳಿಕೆ ಹಣವನ್ನು ಕೊಡುತ್ತಾರೆ. ಈ ರೀತಿ ದುರ್ವ್ಯವಹಾರ ಮಾಡುತ್ತಿದ್ದಾರೆ. ಅದೇ ರೀತಿಯಾಗಿ ಕಲ್ಬುರ್ಗಿ ಮತ್ತು ಬಡವರ ಬಳಗದ ಸ್ಕೂಲ್ ಮೇಷ್ಟ್ರುಗಳಿಗೆ ಸುಮಾರು 1½ ವರ್ಷದಿಂದ ಅವರಿಗೆ ಸಂಬಳ ಕೊಡುತ್ತಾ ಇಲ್ಲ. ಆರೀತಿ ಅವರಿಗೆ ಸಂಬಳ ಕೊಡದೇ ಹೋದರೂ ಸ್ಕೂಲುಗಳನ್ನು ವರ್ಗಾಂಶದಲ್ಲಿ ಮಾಡುತ್ತಾ ಇದ್ದಾರೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ ?

Sri B. B. SAYANAK.—The Government is paying salary to the teachers by cheques; but the managements are insisting the teachers to pay Rs. 50 from the amount that they receive. Will the Government take action against the managements ?

Sri A. R. BADARINARAYANA.—The teachers might be advised not to succumb to the influence of the management.

ಶ್ರೀ ಎಚ್. ಡಿ. ದೇವೇಗೌಡ.—ಮ್ಯಾನೇಜ್‌ಮೆಂಟಿನವರ ಜೊತೆ ಸರ್ಕಾರ ಶಾಮಿಲಾಗಿ ಅದಾಗ ಉಪಾಧ್ಯಾಯರುಗಳು ಕೊಟ್ಟಂಥ ದೂರುಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವರು ವಿಧಾನಸೌಧ ಲೆಜಿಸ್ಲೇಟರ್ಸ್ ಹೋಂ ಮತ್ತು ಜನರಲ್ ಹಾಸ್ಪಿಟಲ್‌ಗಳಿಗೆ ತಿರುಗಿ ಸಾಕಾಗಿ ಮ್ಯಾನೇಜ್‌ಮೆಂಟ್ ಬಗ್ಗೆ ಸರ್ಕಾರಕ್ಕೆ ದೂರು ಕೊಟ್ಟದ್ದು ತಪ್ಪಾಯಿತು ಎಂದು ತಿಳಿದುಕೊಂಡದ್ದು, ಆ ರೀತಿ ಮ್ಯಾನೇಜ್‌ಮೆಂಟ್ ಜೊತೆಗೆ ಕಲ್ಯೂಡ್ ಆಗಿರುವುದು ನಿಜವೇ ?

ಶ್ರೀ ಎ. ಆರ್. ಬದರೀನಾರಾಯಣ.—ಸರ್ಕಾರದವರು ಮ್ಯಾನೇಜ್‌ಮೆಂಟಿನವರ ಜೊತೆಗೆ ಶಾಮೀಲಾಗಿರುವ ನಿದರ್ಶನ ತಂದರೆ ಅದನ್ನು ಸರಿಪಡಿಸುತ್ತೇವೆ. ಸರ್ಕಾರ ಎಂದರೆ ಕ್ಯಾಬಿನೆಟ್ ಮಿನಿಸ್ಟ್ರೇ ಅಥವಾ ಅಧಿಕಾರಿಗಳೇ ?

ಶ್ರೀ ಕೆ. ಎನ್. ವೀರಪ್ಪಗೌಡ.—ಖಾಸಗಿಯವರಿಗೆ ಶಾಲೆ ನಡೆಸುವುದಕ್ಕೆ ಕಾಲೇಜ್ ನಡೆಸುವುದಕ್ಕೆ ಅವಕಾಶಕೊಟ್ಟು ಅಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರತಿ ವರ್ಷವೂ ಸರ್ಕಾರದ ಗಮನಕ್ಕೆ ಬಂದಾಗ್ಯೂ ಖಾಸಗಿಯವರಿಗೆ ಕಾಲೇಜ್ ನಡೆಸುವುದನ್ನು ಕೊಡುವುದಕ್ಕೆ ಕಾರಣವೇನು ?

ಒಬ್ಬ ಸದಸ್ಯರು.—ಆಲ್ ಮೈಸೂರು ಸ್ಟೇಟ್ ಏಡೆಡ್ ಸ್ಕೂಲ್ಸ್ ಎಂಪ್ಲಾಯೀಸ್ ಅಸೋಸಿಯೇಷನ್‌ನವರು ರೆಪ್ರೆಸೆಂಟೇಷನ್ ಕೊಟ್ಟಿದ್ದರೂ 9 ತಿಂಗಳು 10 ತಿಂಗಳು ಆದರೂ ಅವರಿಗೆ ನಂಬಳ ಬಂದಿಲ್ಲ ಇಷ್ಟೊಂದು ಅನಾನುಕೂಲ ನಡೆದರೂ ಯಾತಕ್ಕೆ ಸರ್ಕಾರದವರು ನಡೆಸುವುದಕ್ಕೆ ಏರ್ಪಾಡು ಮಾಡಬಾರದು ?

ಶ್ರೀ ಎ. ಆರ್. ಬದರಿನಾರಾಯಣ.—ಖಾಸಗಿ ಸಂಸ್ಥೆಗಳು ಎಲ್ಲಾ ಅನ್ಯಾಯ ಮಾಡುತ್ತಾರೆಂದು ಹೇಳಿದರೆ ಸರ್ಕಾರ ಒಪ್ಪುವುದಿಲ್ಲ. ಚೆನ್ನಾಗಿ ನಡೆಸತಕ್ಕವರು ಬಹಳ ಜನ ಇದ್ದಾರೆ. ಚೆನ್ನಾಗಿ ನಡೆಸದೆ ಇದ್ದವರಿಗೆ ಅವರ ಮೇಲೆ ಕಂಪ್ಲೈಂಟ್ಸ್ ಇದ್ದರೆ ಇನ್‌ವೆಸ್ಟಿಗೇಟ್ ಮಾಡಿ ಅನೇಕರಿಗೆ ಪನಿಷ್‌ಮೆಂಟ್ ಕೂಡ ಮಾಡಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಹಿಂದೆ ಒನ್ ಮ್ಯಾನ್ ಕಮಿಟಿ ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಮಾಡಿದ್ದಿರಿ. ಅದರ ಫಲತಾಂಶ ಏನು ?

ಶ್ರೀ ಎ. ಆರ್. ಬದರಿನಾರಾಯಣ್.—ಒನ್ ಮ್ಯಾನ್ ಕಮಿಷನ್ ಕೆಲಸ ಮಾಡುತ್ತಾ ಇದೆ. ಕೆಲಸ ಸಂಪೂರ್ಣವಾಗಿ ಆಗಿಲ್ಲ. ಕಮಿಷನ್ ಅವಧಿ ಈಗ ಮುಗಿಯಿತು. ಆ ಅವಧಿಯನ್ನು ಮುಂದುವರಿಸುತ್ತೇವೆ. ಮುಂದುವರಿಸಿದ ಮೇಲೆ ಸಂಪೂರ್ಣವಾಗಿ ತನಿಖೆಯಾಗಿ ರೀಪೋರ್ಟ್ ಆದ ಮೇಲೆ ಮಾನ್ಯ ಸದಸ್ಯರಿಗೆ ಅವನ್ನು ತಿಳಿಸುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಖಾಸಗಿ ಶಾಲೆಗಳು ಎಲ್ಲಾ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಹೇಳಿದರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಒಂದು ಖಾಸಗಿ ಶಾಲೆಯಲ್ಲಿ ಮಗಳು, ಅಳಿಯ, ಸೊಸೆ ಮತ್ತು ಎಲ್ಲಾ ಅವರ ಸಂಬಂಧಿಗಳು ಶಾಲೆಯನ್ನು ನಡೆಸಿ ಅಲ್ಲಿ ಅವರದೇ ಆದ ಒಂದು ಪ್ರಭಾವ ಬೀರಿದ್ದಾರೆ. ಇದರ ಬಗ್ಗೆ ಅನೇಕ ಬಾರಿ ಸರ್ಕಾರದ ಗಮನಕ್ಕೆ ರೀಪೋರ್ಟ್ ಮಾಡಿದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ ಇದಕ್ಕೆ ಕಾರಣ ಏನು ತಿಳಿಸುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಹಾಗೆ ಮಾಡುತ್ತಾ ಇದ್ದರೆ ಅದು ಶುದ್ಧ ತಪ್ಪು. ಒಂದುವೇಳೆ ಇದು ಸರ್ಕಾರದ ಗಮನಕ್ಕೆ ಬಂದರೆ ತಕ್ಷಣ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ಸರ್ಕಾರದವರು ಉಪಾಧ್ಯಾಯರಿಗೆ ಚೆಕ್ ಮೂಲಕ ಸಂಭಾವನೆ ಕೊಡುತ್ತಾ ಇರುವಾಗಲೂ ಕೆಲವರು ಅವರಿಂದ ಹಣ ವಸೂಲು ಮಾಡುತ್ತಾರೆ ಎಂದು ದೂರುಗಳು ಬಂದಿರುವಾಗ ಸರ್ಕಾರದವರು ಚೆಕ್ಕನ್ನು "ಪೇಯೀಸ್ ಅಕೌಂಟ್ ಒನ್ಲಿ" ಎಂದು ಯಾತಕ್ಕೆ ಮಾಡಿ ಬಾರದು ? ಆಗ ಇಂತಹ ಅನೀತಿ ಕೆಲಸ ನಡೆಯುವುದು ಕಡಿಮೆಯಾಗುತ್ತದೆ. ಅದನ್ನು ಆಲೋಚನೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—It is a suggestion. It will be considered.

ಶ್ರೀ ಕ. ಆರ್. ಶ್ರೀನಿವಾಸುಲುನಾಯ್ಡು.—ಟೀಚರ್ಸ್‌ಗಳಿಗೆ ಚೆಕ್ ಸಿಸ್ಟಮ್ ಇಂಟರ್‌ಡ್ಯೂಸ್ ಮಾಡಿದ್ದಾರೆ ಅದೇ ತರಹ ನರ್ಸರಿ ಸ್ಕೂಲುಗಳ ಟೀಚರ್ಸ್‌ಗಳಿಗೂ ಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ.—ನರ್ಸರಿ ಸ್ಕೂಲುಗಳಿಗೂ ಕೊಡುವುದಕ್ಕೆ ಸಲಹೆಗಳು ಬಂದಿವೆ. ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮೈಸೂರಿನಲ್ಲಿರತಕ್ಕ ರಾಯಲ್ ಇಂಗ್ಲೀಷ್ ಸ್ಕೂಲು ಮಾಲೀಕರು ಮಂತ್ರಿಗಳ ಕಾರಿನಲ್ಲಿ ಓಡಾಡುತ್ತಿರುತ್ತಾರೆ. ಅಲ್ಲಿ ಅವ್ಯವಹಾರ ಆಗಿದ್ದರೂ ಯಾರು ಶಾಮೀಲು ಆಗಿದ್ದಾರೆಂದು ಗೊತ್ತಾಗುವುದಿಲ್ಲ ?

ಶ್ರೀ ಎ. ಆರ್. ಬದರೀನಾರಾಯಣ.—ಅವ್ಯವಹಾರಗಳ ಬಗ್ಗೆ ಮಾನ್ಯ ಸದಸ್ಯರು ತಿಳಿಸಿದರೆ ಆ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ.—ನಂದನವನ, ಕೋಟೆ ಸ್ಕೂಲುಗಳ ಬಗ್ಗೆ ಬಜೆಟ್ ಅಧಿವೇಶನದಲ್ಲಿ ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಾಗ ಸ್ಪಷ್ಟವಾಗಿ ಅಲ್ಲಿಯ ಆಡಳಿತ ನಿರ್ವಹಣೆ ಮತ್ತು ನಡೆಯುತಕ್ಕ ದುರ್ವ್ಯವಹಾರ, ಅಕ್ರಮ ನೀತಿ ಬಗ್ಗೆ ವಿಚಾರಿಸುತ್ತೇನೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಿರಿ. ಏನು ಅಕ್ರಮ ಅನೀತಿ ನಡೆದಿದೆ ಎಂದು ಹೇಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅವ್ಯವಹಾರ ನಡೆಯುತ್ತಿದೆ ಎಂದು ಕಂಪ್ಲೆಂಟ್ ಬಂದಾಗ ಒಬ್ಬ ದಕ್ಷ ಅಧಿಕಾರಿಯನ್ನು ನೇಮಿಸಿ ಅವರು ಎನ್‌ಕ್ವೈರಿ ಮಾಡುತ್ತಿದ್ದಾರೆ. ಎನ್‌ಕ್ವೈರಿ ರಿಪೋರ್ಟ್ ಬಂದಮೇಲೆ ತಕ್ಷಣ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಖಾಸಗಿ ಶಾಲೆಗಳಲ್ಲಿ ನರ್ಸರಿ, ಪ್ರೈಮರಿ ಮತ್ತು ಹೈಸ್ಕೂಲು ಇನ್ನು ಮುಕ್ಕ ಕಡೆ ಈ ರೀತಿ ಅವ್ಯವಹಾರ ನಡೆದು ನಂಬಿಕೆ ಕೊಡಪ ಇರುವುದು ವಿನಾಕಾರಣ ವಜಾ ಮಾಡುವುದು ಈ ರೀತಿ ಅನೇಕ ಕಡೆ ದೂರು ಬಂದಿರುವುದರಿಂದ ಕೊಠಾರಿಯವರ ರೆಕ್‌ಮಂಡೇಷನ್ನಿನಂತೆ ಎಲ್ಲಾ ಸ್ಕೂಲುಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂಬುದನ್ನ ತೀವ್ರವಾಗಿ ಆಲೋಚನೆ ಮಾಡಿ ತಮ್ಮ ಕಾಲದಲ್ಲಾದರೂ ರಾಷ್ಟ್ರೀಕರಣ ಮಾಡಿ ಪುಣ್ಯ ಕಟ್ಟಿಕೊಳ್ಳುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ.—ಎಲ್ಲಾ ಕಡೆಯಲ್ಲೂ ಕೂಡ ಅವ್ಯವಹಾರ ನಡೆಯುತ್ತದೆ ಎಂದು ಸರ್ಕಾರ ಒಪ್ಪುವುದಿಲ್ಲ. ಬಹಳ ಚೆನ್ನಾಗಿ ಯೋಗ್ಯವಾಗಿ ನಡೆಸತಕ್ಕವರು ಇದ್ದಾರೆ ಮತ್ತು ನಡೆಸುತ್ತಾ ಇದ್ದಾರೆ. ಎಲ್ಲೆ ನಡೆಸುತ್ತಾ ಇಲ್ಲವೋ ಅಲ್ಲಿ ಆಕ್ಷನ್ ತೆಗೆದುಕೊಳ್ಳುತ್ತೇವೆ. ಸರ್ಕಾರವೇ ಅದನ್ನೆಲ್ಲಾ ತೆಗೆದುಕೊಳ್ಳಬೇಕು ಎಂದರೆ ಅ ನೀತಿಯ ಪ್ರಶ್ನೆ. ಅದನ್ನು ಸರ್ಕಾರ ಪರ್ಯಾಲೋಚನೆ ಮಾಡಬೇಕಾಗುತ್ತದೆ.

RETAINER FEE AND REMUNERATION PAYABLE TO GOVERNMENT PLEADERS AND PUBLIC PROSECUTORS

433. Sri ANDANAIAH (Kunigal).—

Will the Minister for Law and Parliamentary Affairs be pleased to state:—

(*a*) the scale of retainer fee and remuneration fixed for the Public Prosecutors in the State;

(*b*) Whether it is a fact that the scale of retainer fee and remuneration fixed for the Public Prosecutors and for the Government Pleader of Bangalore District is altogether different from that of other Districts in the State;

(*c*) if so, reasons for discrimination;

(*d*) whether in some Districts the Public Prosecutors and Government Pleaders have been provided with facilities like office room, furniture and a clerk to attend to miscellaneous work;

(*e*) the year in which the retainer fee and remuneration was fixed?

Sri D. K. NAIKAR (Minister for Law and Parliamentary Affairs).—

(*a*) A copy of the Government Order No. LAW 55 LAG 72, dated 30th September 1972 regulating the scale of fees and retainer payable to the Government Pleaders and Public Prosecutors in the State with effect from 1st October 1972 is appended.